ಬೇರುಗಳನ್ನು ಬುಡಸಮೇತ ಕೀಳುತ್ತಿದ್ದಾರೆ. ಕಿತ್ತರೆ ಕೀಳಲಿ, ಒಡೆದ ಕನ್ನಡಿಯ ಚೂರುಗಳನ್ನು ಹೊಂದಿಸಲಾಗುತ್ತದೆಯೇ. ನೌಕರಿ ಮುಗಿದ ನಂತರ ತಾನು ಇಲ್ಲಿಗೆ ವಾಪಸ್ ಬರಬೇಕೆಂದುಕೊಂಡಿದ್ದೆ. ಗಿಡಗಂಟೆಯ ಹಾಡು ಆಲಿಸಬೇಕೆಂದಿದ್ದೆ. ತೋಟದ ಮನೆ ಕಟ್ಟಿಸಬೇಕೆಂದಿದ್ದೆ. ಅದೀಗ ಸುಳ್ಳಾಗುತ್ತದೆಯೇ? ಅಂದರೆ ಊರು ತನ್ನನ್ನು ಮರೆಯುತ್ತದೆಯೇ? ಈ ಊರಿನ ಮಣ್ಣಲ್ಲಿ ತನ್ನನ್ನು ಹುಗಿಯುವುದಿಲ್ಲವೆ? ಇಲ್ಲಿಯ ನೀರುಗಾಳಿಯಲ್ಲಿ ತನ್ನ ನೆನಪು ಸೇರಿಹೋಗುವುದಿಲ್ಲವೆ? ಬೆಂಗಳೂರಿನಲ್ಲಿ ತನ್ನನ್ನು ಯಾರೂ ಕೇಳುತ್ತಿಲ್ಲವೆಂದು ಊರಕಡೆಗೆ ತಾನು ಮುಖ ಮಾಡುತ್ತಿರುವೆನೆ? ತನ್ನ ಅಸ್ತಿತ್ವ ತೋರಿಸಲೆಂದು ತಾನು ಹೀಗೆಲ್ಲ ಮಾಡುತ್ತಿರುವೆನೆ? ನಾಗರಾಜನ ತುಟಿಯಲ್ಲಿ ಹುಸಿನಗೆ ತೇಲಿತು. ಅವನ ಮನಸ್ಸು ಎಲ್ಲೆಲ್ಲಿಯೋ ಜಾರುತ್ತಿತ್ತು. ಸಂಬಂಧಗಳ ಬಿಂಬ ತೋರಿಸುತ್ತಿದ್ದ ದರ್ಪಣ ಛಿದ್ರಛಿದ್ರವಾಗಿದೆ.

ನಾಗರಾಜ ಒಂದು ದೀರ್ಘ ಉಸಿರು ಎಳೆದುಕೊಂಡ. ಬಸ್ಸುಗಳು ಬರುತ್ತಿವೆ. ಹೋಗುತ್ತಿವೆ. ಅವುಗಳನ್ನು ನೋಡುತ್ತಾನೆ, ಅಷ್ಟೆ. ಎಲ್ಲ ಬಸ್ಸುಗಳು ತುಂಬಿಕೊಂಡು ಬರುತ್ತಿವೆ. ಬಸ್‌ಸ್ಟಾಪಿನ ಎಲ್ಲ ಪ್ಲಾಟ್‌ಫಾರ್ಮಗಳನ್ನು ಅವನು ಒಂದು ಸುತ್ತು ಹಾಕಿ ಬಂದ. ಮಧ್ಯಾಹ್ನ ಮೂರರ ಈ ರಣಗುಡುವ ಬಿಸಿಲಿನಲ್ಲಿ ಜನ ಎಲ್ಲಿಗೆ ಹೋಗುತ್ತಿದ್ದಾರೆಯೋ ಯಾರಿಗೆ ಗೊತ್ತು? ಯಾವ ಪ್ಲಾಟ್‌ಫಾರ್ಮಿನಲ್ಲಿ ನೋಡಿದರೂ ಜನಜಂಗುಳಿ. ಬೆಂಗಳೂರು ಕಡೆಗೆ ಹೋಗುವವರಂತೂ ಕಿಕ್ಕಿರಿದಿದ್ದರು. ಅಥಣಿ –ಬೆಂಗಳೂರು, ಸದಲಗಾ –ಬೆಂಗಳೂರು, ಚಿಕ್ಕೋಡಿ –ಬೆಂಗಳೂರು, ತೇರದಾಳ –ಬೆಂಗಳೂರು, ರೋಣ –ಬೆಂಗಳೂರು, ಬಾದಾಮಿ –ಬೆಂಗಳೂರು ಎಂದು ಬೋರ್ಡ್ ಹಾಕಿಕೊಂಡು ಬರುವ ಬಸ್ಸುಗಳು ಅಲ್ಲಿಗೆ ಬರುವುದೇ ತಡ ಬಸ್ಸುಗಳನ್ನು ಯಾವಾಗಲಾದರೂ ನೋಡಿದ್ದೇವೆಯೋ ಇಲ್ಲವೋ ಎಂಬಂತೆ ಮಂದಿ ಅವುಗಳತ್ತ ಓಡುತ್ತಿದ್ದರು. ಬಸ್ಸಿನ ಹಿಂದುಗಡೆ, ಮುಂದುಗಡೆ ಅಪಾರ ಜನಸಮುದ್ರ ಚಲಿಸುತ್ತಿತ್ತು. ಜನರು ನಿಂತ ಭಂಗಿಗಳು ಕೂಡ ಚಾಲಕರನ್ನು ದಿಗ್ಭ್ರಮೆಗೊಳಿಸುತ್ತಿದ್ದವು. ನಿಂತಲ್ಲಿ ನಿಲ್ಲದೆ, ಕುಂತಲ್ಲಿ ಕೂಡದೆ ಅವರು ಹರಟುತ್ತಿದ್ದ ರೀತಿಗಳು ಡ್ರೈವರ್ ಕಂಡಕ್ಟರ್‌ಗಳಿಗೆ ಕೆಲವೊಮ್ಮೆ ವಿನೋದಮಯವಾಗಿರುತ್ತಿದ್ದವು. ಲಘುಕೋನ, ಲಂಬಕೋನ, ವೃತ್ತಕೋನ, ಪಾರ್ಶ್ವಕೋನಗಳಲ್ಲಿ ಮಣೆಯುತ್ತಿದ್ದ ಮಂದಿಯನ್ನು ನೋಡುತ್ತ ನಾಗರಾಜ ಸ್ವಲ್ಪ ಗೆಲುವಾಗಲು ಪ್ರಯತ್ನಿಸಿದ.

ಬಸ್ ನಿಲ್ದಾಣದಲ್ಲಿಯ ಪುಸ್ತಕದಂಗಡಿಗೆ ಹೋಗಿ ಆವತ್ತಿನ ಪೇಪರ್ ಖರೀದಿಸಿದ. ಆ ಪುಟಗಳನ್ನು ತಿರುವುತ್ತಿದ್ದಾಗಲೂ ನಿನ್ನೆಯಿಂದ ನಡೆದ ಘಟನೆಗಳೆ ಕಣ್ಮುಂದೆ ಬರುತ್ತಿದ್ದವು. ತಿರುಗಿ ಬೆಂಗಳೂರಿಗೆ ಹೋಗುವ ನಿರ್ಧಾರವನ್ನು ಸಿಟ್ಟಿನಲ್ಲಿ ತೆಗೆದುಕೊಳ್ಳಬಾರದಾಗಿತ್ತು. ಒಂದು ದಿನ ಇರಬೇಕಿತ್ತು. ಅಂದರೆ ಯಾವುದಾದರೂ ಇತ್ಯರ್ಥ ಆಗಬಹುದಿತ್ತು. ಮಾವನಿಗೆ ತಾನು ಹೋಗಿಬರುತ್ತೇನೆ ಎಂದು ಹೇಳಲಿಲ್ಲ. ಅವನೂ ಕೇಳಲಿಲ್ಲ. ಊಟ ಮಾಡಿ ಹೋಗು ಎನ್ನುವ ಅತ್ತೆ ಕೂಡ ಈ ಸಲ ಸುಮ್ಮನೆ ಇದ್ದಳು. ಪಡಸಾಲೆಯ ಮಂಚದ ಮೇಲೆ ಕುಳಿತಿದ್ದ ಅವರ ಮಕ್ಕಳು ತಾನು ಪರಿಚಿತನಲ್ಲವೆಂಬಂತೆ ಟೀವಿ ನೋಡುವುದರಲ್ಲಿ ಮಗ್ನರಾಗಿದ್ದರು. ಊರಲ್ಲಿಯ ಗೆಳೆಯರು ತನ್ನ ಸಹಾಯಕ್ಕೆ ಬರಲಾರರೆ? ಬಂದೇ ಬರುತ್ತಾರೆ. ತಾನು ಅವರನ್ನು ಭೆಟ್ಟಿಯಾಗಿ ಬರಬೇಕಿತ್ತು. ಕನಿಷ್ಠಪಕ್ಷ ಸುಶೀಲಾಳನ್ನಾದರೂ ಭೆಟ್ಟಿಯಾಗಬೇಕಿತ್ತು. ಅವಳು ಏನಾದರೂ ಉಪಾಯ ಸೂಚಿಸಬಹುದಿತ್ತು. ಆಕೆ ಹಿಂದೊಮ್ಮೆ ಕೇಳಿದ್ದಳು: ‘ಒಂದು ಸಲಾನಾದ್ರೂ ಭೆಟ್ಟಿಯಾಗುವಷ್ಟು ಟೈಮ್ ಇರಂಗಿಲ್ಲೇನು ನಿನಗ? ಬರಗ್ಗನ ಬರ್ತೀ, ಬರಗ್ಗಂತ